# ಪ್ರಕಟಣೆ

ಸಾರ್ವಜನಿಕರಿಗೆ ಈ ಮೂಲಕ ತಿಳಿಸುವುದೇನೆಂದರೆ ಪ್ರಾದೇಶಿಕ ಸಾರಿಗೆ ಪ್ರಾಧಿಕಾರದ ನಿರ್ಣಯದಂತೆ ಬೃಹತ್ ಬೆಂಗಳೂರು ಮಹಾನಗರ ಪಾಲಿಕೆಯ ವ್ಯಾಪ್ತಿಯಲ್ಲಿ ಸಂಚರಿಸುತ್ತಿರುವ ಆಟೋರಿಕ್ಷಾಗಳಿಗೆ ಸುರಕ್ಷತಾ ಅಂಶಗಳನ್ನು ಒಳಗೊಂಡ ಪೂರ್ವ ಮುದ್ರಿತ ಭದ್ರತಾ ಕಾಗದದಲ್ಲಿ ಇ-ಪರ್ಮಿಟ್ ನೀಡುವ ಯೋಜನೆಯನ್ನು ಅನುಷ್ಠಾನಗೊಳಿಸುವ ನಿಟ್ಟಿನಲ್ಲಿ ಈಗಾಗಲೇ ಪಡೆದಿರುವ ಆಟೋರಿಕ್ಷಾ ಮೂಲ ರಹದಾರಿ ಮತ್ತು ಅಧಿಕೃತ ಗುರುತಿನ ಚೀಟಿಯೊಂದಿಗೆ ಕಛೇರಿಗೆ ಬಂದು ಸದರಿ ದಾಖಲೆಗಳನ್ನು ಹಾಜರುಪಡಿಸಿ ಪರಿವರ್ತಿತ ಇ-ಪರ್ಮಿಟ್ ರಹದಾರಿಯನ್ನು ಪಡೆಯುವಂತೆ ಈ ಮೂಲಕ ತಿಳಿಸಿದೆ ಹಾಗೂ ದಿನಾಂಕ:22-06-2020 ರಿಂದ ಹೊಸದಾಗಿ ನೀಡುವ ಆಟೋರಿಕ್ಷಾ ರಹದಾರಿ, ರಹದಾರಿಯ ವರ್ಗಾವಣೆ ಮತ್ತು ವಾಹನ ಬದಲಾವಣೆ ನಮೂದು ಮತ್ತು ನವೀಕರಣ ಒಳಗೊಂಡಂತೆ ಎಲ್ಲಾ ಪ್ರಕ್ರಿಯೆಗೊಂಡ ನಂತರ ಇ-ಪರ್ಮಿಟ್ ಮುಖೇನವೇ ರಹದಾರಿಯನ್ನು ವಿತರಿಸಲಾಗುವುದು.

ಪ್ರಾದೇಶಿಕ ಸಾರಿಗೆ ಅಧಿಕಾರಿಗಳು/ಹೆಚ್ಚುವರಿ ಕಾರ್ಯದರ್ಶಿ,
(ಆಟೋರಿಕ್ಷಾ ರಹದಾರಿ ಮತ್ತು ರಾಜ್ಯ ಸಾರಿಗೆ ನಿಗಮಗಳು)
ಶಾಂತಿನಗರ. ಬೆಂಗಳೂರು-27